**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್‍ಃ223/2016**

ಸಿಡಬ್ಲ್ಯೂಃ3 ಮತ್ತು 7

ಪಿಡಬ್ಲ್ಯೂಃ3

| | | |
|---|---|---|
| ಸಾಕ್ಷಿಯ ಹೆಸರು | : | ಮೊಹಮದ್ ಹುಸೇನ ಕೋಡ |
| ತಂದೆಯ ಹೆಸರು | : | ಅಬ್ದುಲ್ ಸಾಬ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಕಾಗಿನೆಲೆ |

ಇಂದು ದಿನಾಂಕಃ02.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಚಾಸಾ-6 ನನ್ನ ಅಣ್ಣ, ಚಾಸಾ-5 ನನ್ನ ಅತ್ತಿಗೆ, ಚಾಸಾ-1 ನನ್ನ ಅಣ್ಣನ ಮಗಳು. ಆರೋಪಿತರ ಪರಿಚಯ ನನಗೆ ಇರುತ್ತದೆ. ದಿನಾಂಕ 23-01-2016 ರಂದು ಚಾಸಾ-1 ರವರು ಹಾಗೂ 1ನೇ ಆರೋಪಿಯ ಮದುವೆ ಚಿಕ್ಕೇರೂರು ಗ್ರಾಮದಲ್ಲಿ ನಡೆದಿರುತ್ತದೆ. ಮದುವೆಯ ಸಮಯದಲ್ಲಿ ಆರೋಪಿತರು 2 ತೊಲ ಬಂಗಾರ ಕೇಳಿದರು. ನಂತರ ಬಂಗಾರ ಬೇಡ ಹಣ ಕೊಡಿ ಎಂದು ಹೇಳಿದ್ದು ಅದರಂತೆ ನಾವು 1,05,000/- ರುಗಳನ್ನು ನೀಡಿರುತ್ತೇವೆ. ಮದುವೆಯಾದ ನಂತರ 5 -6 ತಿಂಗಳು ಚೆನ್ನಾಗಿಯೇ ಇದಿದ್ದು ನಂತರ ಆರೋಪಿತರು ಹೆಚ್ಚಿನ ವರದಕ್ಷಿಣೆಗಾಗಿ ಬಂಗಾರ ಕೊಡಲಿಲ್ಲ ಎಂದು ಹೇಳಿ ಕಿರುಕುಳ ನೀಡಲು ಶುರುಮಾಡಿರುತ್ತಾರೆ. ಆರೋಪಿತರು ಚಾಸಾ-1 ರವರಿಗೆ ನಿನ್ನನ್ನು ಸೀಮೆಎಣ್ಣೆ ಹಾಕಿ ಸುಟ್ಟು ಬಿಡುತ್ತೇವೆ, ನೀನು ಚೆನ್ನಾಗಿಲ್ಲ ನಿನ್ನ ಬಿಟ್ಟು ಬೇರೆಯವರಿಗೆ ಹೆಚ್ಚಿನ ವರದಕ್ಷಿಣೆ ಕೊಡುವುವರನ್ನು ಮದುವೆ ಮಾಡುತ್ತೇವೆ ಎಂದು ಹೇಳಿದರು. ನಂತರ ಈ ಬಗ್ಗೆ ಚಾಸಾ-1 ರವರು ಚಾಸಾ-6 ರವರ ಬಳಿ ತಿಳಿಸಿದ್ದು, ನಂತರ ನನ್ನ ಅಣ್ಣ ಮತ್ತು ಅತ್ತಿಗೆ ಚಾಸಾ-1 ರವರಿಗೆ ಬುದ್ದಿ ಹೇಳಿ ಪಂಚಾಯತಿ ಮಾಡಿ ತನ್ನ ಗಂಡನ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರವೂ ಕೂಡ ಆರೋಪಿತರು ಚಾಸಾ-1 ರವರಿಗೆ ಹಿಂಸೆ ಕೊಡಲು ಪ್ರಾರಂಭಿಸಿರುತ್ತಾರೆ. ಈ ಬಗ್ಗೆ ನಾವು ಹಲವಾರು ಪಂಚಾಯತಿ ಮಾಡಿ ಚಾಸಾ-1 ಹಾಗೂ 1ನೇ ಆರೋಪಿಯನ್ನು ಬೇರೆ ಮನೆ ಮಾಡಿ ಇಡಲು ನಿರ್ದಾರ ಮಾಡಿದ್ದೆವು. ಅದರಂತೆ 1ನೇ ಆರೋಪಿ ಹಾಗೂ ಚಾಸಾ-1 ರವರು ಬೇರೆ ಮನೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಹೀಗಿರುವಾಗ ದಿನಾಂಕ 30-01-2016 ರಂದು 2 ಮತ್ತು 3 ನೇ ಆರೋಪಿತರು ಚಾಸಾ-1 ರವರ ಮನೆಗೆ ಹೋಗಿ

1ನೇ ಆರೋಪಿಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ಬೈಯ್ದು, ನಂತರ 1ನೇ ಆರೋಪಿ ಚಾಸಾ-5 ಮತ್ತು 6 ರವರಿಗೆ ಕರೆ ಮಾಡಿ ನಿನ್ನ ಮಗಳನ್ನು ಕೊನೆ ಬಾರಿ ನೋಡಿಕೊಂಡು ಹೋಗಿ ಅವಳನ್ನು ಸುಟ್ಟು ಹಾಕುತ್ತಿದ್ದೇವೆ ಎಂದು ಹೇಳಿದರು. ಈ ಬಗ್ಗೆ ನನ್ನ ಅಣ್ಣ ಅತ್ತಿಗೆ ನನ್ನ ಬಳಿ ತಿಳಿಸಿದ್ದು ನಂತರ ನಾವು ಅಲ್ಲಿಗೆ ಹೋಗಿದ್ದು ನನ್ನ ಅತ್ತಿಗೆ 1ನೇ ಆರೋಪಿಯ ಬಳಿ ನನ್ನೊಂದಿಗೆ ಚಾಸಾ-1 ರವರನ್ನು ಕಳುಹಿಸಿ ಎಂದು ಬೇಡಿಕೊಂಡರು. ನಂತರ ಆರೋಪಿತರು ನಮ್ಮ ಅತ್ತಿಗೆಗೆ ಹೊಡೆದು ತಳ್ಳಿ ಕಾಲಿನಿಂದ ಒದ್ದಿರುತ್ತಾರೆ. ಚಾಸಾ-1 ರವರ ತಲೆಯನ್ನು ಹಿಡಿದುಕೊಂಡು ಹೋಗಿ 1ನೇ ಆರೋಪಿ ಗೋಡೆಗೆ ಜಜ್ಜಿರುತ್ತಾರೆ. ಆಗ ಚಾಸಾ-1 ರವರು ಪ್ರಜ್ಞೆ ತಪ್ಪಿ ಬಿದ್ದಿರುತ್ತಾರೆ. ನಂತರ ನಾವು ಗಲಾಟೆಯನ್ನು ಬಿಡಿಸಿ ಚಾಸಾ-1 ರವರನ್ನು ಕರೆದುಕೊಂಡು ಹಾವೇರಿ ಆಸ್ಪತ್ರೆಗೆ ಹೋಗಿರುತ್ತೇವೆ. ಆ ರೀತಿ ಆರೋಪಿತರು ನಮ್ಮ ಅತ್ತಿಗೆ ಹೊಡೆದಿದ್ದರಿಂದ ಈಗಲೂ ಆಕೆಯ ಕಾಲು ನಡೆಯಲು ಸಾದ್ಯವಾಗುವುದಿಲ್ಲ. ಈ ಬಗ್ಗೆ ಚಾಸಾ-1 ರವರು ದೂರನ್ನು ನೀಡಿದ್ದು ಪೋಲಿಸರು ವಿಚಾರಣೆ ಮಾಡಿ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತಾರೆ. ಸಾಕ್ಷಿಗೆ ಅಪರಾಧ ಜಾಗೆಯ ಪಂಚನಾಮೆಯನ್ನು ತೋರಿಸಲಾಗಿದ್ದು ಅದರಲ್ಲಿದ್ದ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ 01-02-2016 ರಂದು ಚಾಸಾ-17 ರವರು ನಮ್ಮನ್ನು ಕರೆಯಿಸಿ ಚಾಸಾ-1 ರವರು ತೋರಿಸಿದ ಜಾಗದಲ್ಲಿ ಪಂಚನಾಮೆಯನ್ನು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಂತರ ಬಾಡಿಗೆ ಮನೆಗೆ ಕರೆದುಕೊಂಡು ಹೋಗಿದ್ದು ಚಾಸಾ-1 ಮತ್ತು 5 ರವರು ತೋರಿಸಿಕೊಟ್ಟ ಜಾಗದಲ್ಲಿ ನಾನು ಮತ್ತು ಚಾಸಾ-4 ರವರ ಸಮಕ್ಷಮದಲ್ಲಿ ಪಂಚನಾಮೆಯ ಮಾಡಿ ನಮ್ಮ ಪೋಟೋವನ್ನು ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ವಿ ವಿ ಎಂ ವಕೀಲರಿಂದಃ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲವಕಾಶವನ್ನು ಕೋರಿದ್ದು ಅದರಂತೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.